ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸಮರ್ಪಕ ತ್ಯಾಜ್ಯ ನಿರ್ವಹಣೆಯಲ್ಲಿ ಮುಂದಿರುವ ಯಾದಗಿರಿಯ ಕೊಳ್ಳೂರು ಗ್ರಾಮ



ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕೊಳ್ಳೂರು ಗ್ರಾಮ ಪಂಚಾಯಿತಿಯು ಜಿಲ್ಲಾ ಕೇಂದ್ರದಿಂದ 51 ಕಿ.ಮೀ ಮತ್ತು ತಾಲೂಕು ಕೇಂದ್ರದಿಂದ 25 ಕಿ.ಮೀ ದೂರದಲ್ಲಿದೆ.

ಯಾದಗಿರಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ವಿವಿಧ ಘಟಕಾಂಶಗಳನ್ನು ಅನುಷ್ಠಾನಗೊಳಿಸುವಲ್ಲಿ ಸ್ಥಳೀಯ ಪಂಚಾಯಿತಿಗಳು ಯಶಸ್ವಿಗೊಂಡಿವೆ. ಅದರಲ್ಲಿ ಕೊಳ್ಳೂರು ಗ್ರಾಮ ಪಂಚಾಯಿತಿ ಕೂಡ ಒಂದು. ಕಳೆದ 1–2 ವರ್ಷದಿಂದ ತ್ಯಾಜ್ಯ ನಿರ್ವಹಣೆಗಾಗಿ ವ್ಯವಸ್ಥಿತ ಕ್ರಿಯಾ ಯೋಜನೆ ತಯಾರಿಸಿ ಕಾಮಗಾರಿಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಈ ನಿಟ್ಟಿನಲ್ಲಿ ಗ್ರಾಮಸ್ಥರ ಪಾಲ್ಗೊಳ್ಳುವಿಕೆ ಮುಖ್ಯ ಎಂಬುದನ್ನು ಅರಿತ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯು ಘನತ್ಯಾಜ್ಯ ವಿಲೇವಾರಿ ಘಟಕದ ಸೂಕ್ತ ನಿರ್ವಹಣೆಗಾಗಿ ಮತ್ತು ಗ್ರಾಮದ ನೈರ್ಮಲ್ಯ ಸುಸ್ಥಿತಿಯಲ್ಲಿಡುವುದಕ್ಕಾಗಿ ಕಾಲಕಾಲಕ್ಕೆ ವಿಶೇಷ ಗ್ರಾಮ ಸಭೆ, ಸ್ವಚ್ಛತಾ ಜಾಥಾ, ಶ್ರಮದಾನ, ತ್ಯಾಜ್ಯ ಮುಕ್ತ ಗ್ರಾಮದಂತಹ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ತ್ಯಾಜ್ಯ ವಿಂಗಡಣೆ, ಜಲಮೂಲಗಳ ಸಂರಕ್ಷಣೆ, ಶೌಚಾಲಯ ಬಳಕೆಯ ಕುರಿತು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಕೊಳ್ಳೂರು ಗ್ರಾಮ ಪಂಚಾಯಿತಿಯ ಸಾರ್ವಜನಿಕರಲ್ಲಿ ಸ್ವಚ್ಛತೆಯ ವಿಚಾರದಲ್ಲಿ ಬದಲಾವಣೆ ತರುವಲ್ಲಿ ಯಶಸ್ವಿಗೊಂಡಿದೆ.



## ಗ್ರಾಮದಲ್ಲಿ ಸ್ವಚ್ಛತೆ ಕಾಪಾಡಲು ಗ್ರಾಮ ಪಂಚಾಯಿತಿಯಿಂದ ಅಗತ್ಯ ಕ್ರಮಗಳ ಅಳವಡಿಕೆ

ತ್ಯಾಜ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿಸಲು ಘನತ್ಯಾಜ್ಯ ನಿರ್ವಹಣೆಗಾಗಿ ಸ್ವಚ್ಛ ಸಂಕೀರ್ಣ ಘಟಕ, ಸ್ವಚ್ಛ ವಾಹಿನಿ, ಸ್ವಚ್ಛತಾ ಸಿಬ್ಬಂದಿ ಹಾಗೂ ಸ್ವಚ್ಛತಾ ಕೆಲಸ ನಿರ್ವಹಿಸುವ ಸಿಬ್ಬಂದಿಗೆ ಕನಿಷ್ಟ ರಕ್ಷಣಾತ್ಮಕ ಪರಿಕರಗಳನ್ನು ನೀಡಲಾಗಿದೆ.

ಗ್ರಾಮ ಪಂಚಾಯಿತಿಯ ಈ ನಡೆಯಿಂದ ಕುಳ್ಳೂರು ಗ್ರಾಮದಲ್ಲಿರುವ 1256 ಕುಟುಂಬಗಳಲ್ಲಿ 1105 ಕುಟುಂಬಗಳು ತ್ಯಾಜ್ಯವನ್ನು ನೇರವಾಗಿ ಸ್ವಚ್ಛವಾಹಿನಿಗೆ ನೀಡುತ್ತಿದ್ದಾರೆ. ಇದರಿಂದ ಸ್ವಚ್ಛ ಸಂಕೀರ್ಣ ಘಟಕದಲ್ಲಿ ಪ್ಲಾಸ್ಟಿಕ್ ಬಾಟೆಲ್, ಗ್ಲಾಸ್, ರಟ್ಟು, ಹಾಲಿನ ಪ್ಯಾಕೇಟ್, ಟೆಟ್ರಾಪ್ಯಾಕ್, ನೀರಿನ ಬಾಟಲ್, ರಬ್ಬರ್ ಇತ್ಯಾದಿ ಸಾಮಾಗ್ರಿಗಳು ಸೇರಿ ದಿನಕ್ಕೆ 38–45 ಕೆಜಿ ವರೆಗೆ ಸಂಗ್ರಹವಾಗುತ್ತಿದೆ. ಈ ಮೂಲಕ ಸ್ವಚ್ಛ ಸಂಕೀರ್ಣ ಘಟಕವು ತನ್ನ ಸಕ್ರಿಯ ಕಾರ್ಯಾಚರಣೆಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳಿಂದ ಪ್ರಶಂಸೆ ಪಡೆದಿದೆ.

## ಇತರ ಗ್ರಾಮ ಪಂಚಾಯಿತಿಗಳಿಗೆ ಮಾದರಿಯಾದ ಕೊಳ್ಳೂರು ಗ್ರಾಮ ಪಂಚಾಯಿತಿಯ ಸ್ವಚ್ಛತಾ ಕಾರ್ಯ

ಗ್ರಾಮ ಪಂಚಾಯಿತಿ ಹಾಗೂ ಗ್ರಾಮಸ್ಥರ ಜವಾಬ್ದಾರಿಯುವ ನಡೆಯಿಂದ ಗ್ರಾಮದಲ್ಲಿ ಬ್ಲಾಕ್ ಸ್ಪಾಟ್, ಚರಂಡಿ ಬ್ಲಾಕ್, ರಸ್ತೆ ಬದಿಯಲ್ಲಿ ಹಾಗೂ ತಿಪ್ಪೆಗುಂಡಿಯಲ್ಲಿ ಪ್ಲಾಸ್ಟಿಕ್ ವಸ್ತುಗಳು, ಬಾಟಲ್ ಗಳನ್ನು ಎಸೆಯುವುದು ಕಡಿಮೆಯಾಗಿದೆ. ಇದರಿಂದ ಸಾರ್ವಜನಿಕ ಸ್ಥಳ, ಸಂಸ್ಥೆಗಳಲ್ಲಿ ಸ್ವಚ್ಛತೆಯಿರುವುದರಿಂದ ಗ್ರಾಮದ ಅಂದ–ಚೆಂದ ಹೆಚ್ಚಳವಾಗಿದ್ದು, ಇದ–ರಿಂದ ಜಿಲ್ಲೆಯ ಇತರೆ ಗ್ರಾಮ ಪಂಚಾಯತಿಯ ಅಧಿಕಾರಿ /ಸಿಬ್ಬಂದಿ, ಸಾರ್ವಜನಿಕರು ಬೇಟಿ ನೀಡಿ ಕಾರ್ಯಚರಣೆಯ ಮಾಹಿತಿ ಪಡೆಯುತ್ತಿದ್ದಾರೆ.

ಗ್ರಾಮ ಪಂಚಾಯಿತಿಯ ಸಹಕಾರದಿಂದ ಗ್ರಾಮಸ್ಥರು ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿ, ಉಳಿದ ಗ್ರಾಮ ಪಂಚಾಯಿತಿಗಳಿಗೆ ಸ್ವಚ್ಛತೆಯ ಅರಿವು ಹಾಗೂ ಮಹತ್ವವನ್ನು ಸಾರುತ್ತಿರುವುದು ನಿಜಕ್ಕೂ ವಿಶೇಷ. ತ್ಯಾಜ್ಯ ಮುಕ್ತ ಭಾರತ ನಿರ್ಮಾಣವಾಗಬೇಕಾದರೆ ಮೊದಲು ಪ್ರತಿ ಗ್ರಾಮಗಳು ತ್ಯಾಜ್ಯ ಮುಕ್ತವಾಗಬೇಕಿದೆ. ಈ ಹಾದಿಯಲ್ಲಿ ಕೊಳ್ಳೂರು ಗ್ರಾಮ ಪಂಚಾಯಿತಿ ಯಶಸ್ವಿಯಾಗಿ ಮುನ್ನುಗ್ಗುತ್ತಿದೆ.